ಕರ್ನಾಟಕ ವಿಧಾನ ಸಭೆ
744

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ

ಅ) ಧಾರವಾಡ ಜಿಲ್ಲೆಯ ಕುಂದಗೋಳ ಪಟ್ಟಣದಲ್ಲಿ ಬಸ್ ಡಿಪೋ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಬಸ್ ಡಿಪೋವನ್ನು ಯಾವಾಗ ನಿರ್ಮಾಣ ಮಾಡಲಾಗುವುದು?

ಇ) ಇಲ್ಲಿಯವರೆಗೆ ಬಸ್ ಡಿಪೋ ನಿರ್ಮಿಸದೇ ಇರಲು ಕಾರಣಗಳೇನು;

ಈ) ಕುಂದಗೋಳ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸಲಾಗುತ್ತಿದೆಯೇ;

ಉ) ಗ್ರಾಮಗಳಿಗೆ ಓಡುತ್ತಿರುವ ಬಸ್ಸುಗಳು ನಿಯಮಿತವಾಗಿ ಹಾಗೂ ವಿದ್ಯಾರ್ಥಿಗಳ ಶಾಲಾ ಸಮಯಕ್ಕೆ ಸಂಚರಿಸುತ್ತಿವೆಯೇ;

ಊ) ನಿಯಮಿತವಾಗಿ ಹಾಗೂ ವಿದ್ಯಾರ್ಥಿಗಳ ಶಾಲಾ ಸಮಯಕ್ಕೆ ಸಂಚರಿಸಲು ತೆಗೆದುಕೊಂಡ ಕ್ರಮಗಳೇನು?

ಮಾನ್ಯ ಉಪಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ

ಅ) ಹೌದು.

ಆ) ಕುಂದಗೋಳದಲ್ಲಿ ಬಸ್ ಘಟಕಕ್ಕಾಗಿ ಸೂಕ್ತ ಸರ್ಕಾರಿ ನಿವೇಶನ ದೊರೆತ ನಂತರ ನಿರ್ಮಾಣ ಮಾಡಲಾಗುವುದು.

ಇ) ಸೂಕ್ತ ನಿವೇಶನ ದೊರಕದೆ ಇರುವುದರಿಂದ ಬಸ್ ಘಟಕ ನಿರ್ಮಿಸಲು ಸಾಧ್ಯವಾಗುವುದಿಲ್ಲ

ಈ) ಕುಂದಗೋಳ ತಲ್ಲೂಕಿನಲ್ಲಿ ಒಟ್ಟು 56 ಹಳ್ಳಿಗಳಿದ್ದು, ಆ ಪೈಕಿ ಸಂಚಾರ ಯೋಗ್ಯ ರಸ್ತೆ ಇರುವ 55 ಹಳ್ಳಿಗಳಿಗೆ ಈಗಾಗಲೇ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ವಿಠ್ಠಲಾಪುರ ಗ್ರಾಮದ ರಸ್ತೆಯು ಸಂಚಾರ ಯೋಗ್ಯವಿಲ್ಲದ ಕಾರಣ ಸಾರಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ

ಉ) ಗ್ರಾಮಗಳಿಗೆ ಓಡುತ್ತಿರುವ ಬಸ್ಸುಗಳು ನಿಯಮಿತವಾಗಿ ಹಾಗೂ ವಿದ್ಯಾರ್ಥಿಗಳ ಶಾಲಾ ಸಮಯಕ್ಕೆ ಸಂಚರಿಸುತ್ತಿವೆ.

ಊ) ಶಾಲಾ, ಕಾಲೇಜು ವೇಳೆಗೆ ಬೆಳಿಗ್ಗೆ, ಮಧ್ಯಾಹ್ನ ಹಾಗೂ ಸಾಯಂಕಾಲ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಸಾರಿಇ 80 ಸಾಸಂಪ್ರ 2012

(ಆರ್. ಅಶೋಕ್)
ಉಪ ಮುಖ್ಯಮಂತ್ರಿಗಳು
ಸಾರಿಗೆ ಮತ್ತು ಗೃಹ